# ಕಬಾಲಿ ಗಲಿಬಿಲಿ!

ಅಯಸ್ಕಾಂತ ಮತ್ತು ರಜನಿಕಾಂತ– ಎರಡರಲ್ಲೂ 'ಕಾಂತ' ಇದೆ! ಎರಡರ ಗುಣವೂ ಆಕರ್ಷಣೆ. ಎದುರಿಗೆ ಸಿಕ್ಕಿದ್ದನ್ನೆಲ್ಲ ಆಕರ್ಷಿಸುವ ಈ ಗುಣ 'ಕಬಾಲಿ'ಯ ರಜನಿಯಲ್ಲೂ ಎದ್ದು ಕಾಣುತ್ತದೆ. 4 ದಿನಗಳಲ್ಲಿ 400 ಕೋಟಿ ರೂಪಾಯಿ ಕಲೆಕ್ಷನ್! ಅದರಲ್ಲೂ ಬಿಡುಗಡೆಗೆ ಮೊದಲೇ ಸಿನಿಮಾವೊಂದು 200 ಕೋಟಿ ರೂಪಾಯಿ ಕಲೆಕ್ಷನ್ ಮಾಡುವುದು ಭಾರತದ ಇದುವರೆಗಿನ ಸಿನಿಮಾ ಇತಿಹಾಸದಲ್ಲೇ ಮೊದಲು! 75 ಕೋಟಿ ರೂಪಾಯಿ ಖರ್ಚು ಮಾಡಿ ತೆಗೆದ ಸಿನಿಮಾ ಮೊದಲ ದಿನವೇ 53 ಕೋಟಿ ರೂಪಾಯಿ ಗಳಿಸಿದ್ದು ನಿರ್ಮಾಪಕರ ಸಂತೋಷವನ್ನು ಇಮ್ಮಡಿಗೊಳಿಸಿದೆ. (ಸಲ್ಮಾನ್ ಖಾನ್‌ನ 'ಪ್ರೇಮ್ ರತನ್ ಧನ್ ಪಾಯೆ' ಸಿನಿಮಾ ಮೊದಲ ದಿನ ಗಳಿಸಿದ 55.03 ಕೋಟಿ ರೂಪಾಯಿಗಳ ದಾಖಲೆಯ ಬಳಿಕ ರಜನಿಯದ್ದೇ ಹೊಸ ದಾಖಲೆ.) ಸಿನಿಮಾವೊಂದರಲ್ಲಿ ನಟಿಸಲು 50ರಿಂದ 60 ಕೋಟಿ ರೂಪಾಯಿ ಸಂಭಾವನೆ ಪಡೆಯುವ ರಜನಿಕಾಂತ್ ನಟಿಸಿದ ಸಿನಿಮಾ, 4 ದಿನಗಳಲ್ಲಿ 400 ಕೋಟಿ ಗಳಿಸಿರುವುದು ಅಭಿಮಾನಿಗಳಿಗೆ ಅಚ್ಚರಿಯೇನಲ್ಲ. ರಜನಿ ಫ್ಯಾನ್ಸ್ ಎಂದರೆ ಹಾಗೆಯೇ. ಅದೊಂದು ಹುಚ್ಚು ಹೊಳೆ. ಸಿನಿಮಾ ಚೆನ್ನಾಗಿರಲಿ, ಇಲ್ಲದಿರಲಿ– ಮೊದಲ ವಾರ ಹೌಸ್‌ಫುಲ್ ಖಚಿತ. ಅಂಥ ಅಭಿಮಾನಿಗಳು ಏನು ಕೊಟ್ಟರೂ ನೋಡುತ್ತಾರೆ. ಆದರೆ ಅಭಿಮಾನಿಗಳು ಅಲ್ಲದವರೂ ಮೊದಲ ವಾರ ಮುಗಿಬಿದ್ದು ರಜನಿಕಾಂತ್ ಸಿನಿಮಾ ನೋಡಲು ಕಾರಣ ಅವರ ಚಿತ್ರಕ್ಕೆ ಸಿಗುವ ಹುಚ್ಚು ಪ್ರಚಾರ. ಸುತ್ತ ಮುತ್ತ ಇರುವವರೆಲ್ಲ ರಜನಿಯ ಸಿನಿಮಾ ಚೆನ್ನಾಗಿದೆ– ಚೆನ್ನಾಗಿಲ್ಲ ಎಂದು ಚರ್ಚಿಸುತ್ತಿರುವಾಗ ಏನೂ ಗೊತ್ತಿಲ್ಲದವರಂತೆ ಸುಮ್ಮನೆ ಕುಳಿತುಕೊಳ್ಳುವುದು ಕಷ್ಟವೇ. ಅದಕ್ಕೆಂದೇ ಜನ ಮುಗಿಬಿದ್ದು ರಜನಿ ಸಿನಿಮಾ ನೋಡುತ್ತಾರೆ.

ರಜನಿಕಾಂತ್ ಭಾರತದಲ್ಲಿ ಮಾತ್ರ ಸೂಪರ್‌ಸ್ಟಾರ್ ಅಲ್ಲ; ಬಹುಶಃ ಭಾರತದ ಮೊತ್ತಮೊದಲ 'ಗ್ಲೋಬಲ್ ಸ್ಟಾರ್' ಕೂಡಾ ರಜನಿಯೇ ಇರಬೇಕು. ಇಲ್ಲವಾದಲ್ಲಿ 'ಗಾಡ್‌ಫಾದರ್' ಸಿನಿಮಾದ ಮೊಣಕಾಲಿಗೂ ಬರದ 'ಕಬಾಲಿ' ಎಂಬ ತಮಿಳು ಚಿತ್ರವನ್ನು ಅಮೆರಿಕದಲ್ಲೂ ಜನ ಎದ್ದೋ ಬಿದ್ದೋ ನೋಡುವುದೇತಕ್ಕೋ? 'ಕಬಾಲಿ' ಸಿನಿಮಾ ವಿದೇಶಗಳಲ್ಲೂ ವಾರಾಂತ್ಯದ ಕೊನೆಗೆ ಸುಮಾರು 90 ಕೋಟಿ ರೂಪಾಯಿ ಗಳಿಸಿದ್ದು ಬಾಕ್ಸಾಫೀಸ್ ದಾಖಲೆಯೇ. ತಮಿಳು, ತೆಲುಗು, ಹಿಂದಿ, ಮಲಯಾಳಂ ಭಾಷೆಗಳಲ್ಲಿ ಬಿಡುಗಡೆಯಾದ 'ಕಬಾಲಿ' ಇನ್ನೀಗ ಚೈನೀಸ್, ಜಪಾನೀಸ್, ಥಾಯ್ ಮತ್ತು ಇಂಡೋನೇಷ್ಯನ್ ಭಾಷೆಗಳಲ್ಲೂ ಬಿಡುಗಡೆ ಕಾಣಲಿದೆಯಂತೆ. ಭಾರತದಲ್ಲಿ ಸುಮಾರು 4000 ಸ್ಕ್ರೀನ್‌ಗಳಲ್ಲಿ ಬಿಡುಗಡೆ ಕಂಡ ಈ ಸಿನಿಮಾ, ಮಾರುಕಟ್ಟೆಯ ತಂತ್ರದ ಮೇಲ್ಮೆಗೆ ಒಂದು ಅತ್ಯುತ್ತಮ ಉದಾಹರಣೆ.

ಮಲೇಷ್ಯಾದಲ್ಲೇ ಅತ್ಯಧಿಕ ಭಾಗ ಶೂಟಿಂಗ್ ನಡೆಸಿರುವ ಸಿನಿಮಾದ ಅಂತ್ಯವನ್ನು, ಮಲೇಷ್ಯಾ ದೇಶಕ್ಕಾಗಿಯೇ ಬದಲಾಯಿಸಿರುವುದು ಈ ಸಿನಿಮಾದ ವಿಶೇಷ! ಭಾರತ ಸಹಿತ ಎಲ್ಲೆಡೆ ಬಿಡುಗಡೆಯಾದ ಸಿನಿಮಾದ ಕೊನೆಯ ದೃಶ್ಯದಲ್ಲಿ ನಾಯಕನಿಗೆ ಗುಂಡೇಟು ಬೀಳುತ್ತದೆ. ಆದರೆ ಸತ್ತನೋ, ಬದುಕಿದನೋ ಎನ್ನುವುದು ಗೊತ್ತಾಗುವುದಿಲ್ಲ. ಆದರೆ ಮಲೇಷ್ಯಾದಲ್ಲಿ ಕೊನೆಯ ದೃಶ್ಯದಲ್ಲಿ ನಾಯಕ ಪೊಲೀಸರಿಗೆ ಶರಣಾಗುತ್ತಾನೆ. ಮಲೇಷ್ಯಾದ ಕಾನೂನಿನ ಪ್ರಕಾರ, ಭೂಗತದೊರೆಗಳು ಕೊನೆಯಲ್ಲಿ ವಿಜೃಂಭಿಸಿ ಬಿಡುಗಡೆ ಆಗುವಂತಿಲ್ಲವಂತೆ! ಅದಕ್ಕೆಂದೇ ಚಿತ್ರಕಥೆಯಲ್ಲಿ ಶರಣಾಗತಿಯ ಬದಲಾವಣೆ!



ಇದು ಚಿತ್ರದ ಕಲೆಕ್ಷನ್ ಮತ್ತು ಚಿತ್ರಕಥೆಯ ಮಾತಾಯಿತು. ಎಂದಿನಂತೆ ರಜನಿಯ ಕುರಿತ ದಂತಕಥೆಗಳಿಗೆ ಈಗಲೂ ಬರವಿಲ್ಲ. ತರ್ಕವೇ ಇಲ್ಲದ, ಕೇವಲ ಸ್ಟೈಲ್ ಮಾತ್ರವೇ ಮುಖ್ಯವಾಗಿರುವ ಫಿಕ್ಷನ್‌ಮಯ ಆ್ಯಕ್ಷನ್ ಚಿತ್ರಗಳಿಗೆ ಹೆಸರಾಗಿರುವ ರಜನಿಕಾಂತ್ 'ಕಬಾಲಿ'ಯಲ್ಲಿ ಅತ್ಯಂತ ಸಂಯಮದಿಂದ ನಿಧಾನಕ್ಕೆ ನಟಿಸಿದ್ದೇಕೆ.. ಎನ್ನುವುದೀಗ ಅರ್ಧಕ್ಕರ್ಧ ಪ್ರೇಕ್ಷಕರನ್ನು ಕಾಡುತ್ತಿರುವ ಪ್ರಶ್ನೆ. 'ಇದು ರಜನಿಯ ವೃತ್ತಿಜೀವನದ ಅಂತ್ಯದ ಆರಂಭ' ಎಂಬ ವ್ಯಾಖ್ಯಾನ ಹಲವೆಡೆ ಕೇಳಿಬರುತ್ತಿದೆ. 'ನಮಗೆ ಬೇಕಿರುವುದು ಬಾಷಾ ರಜನಿ. ಈ ಸಿನಿಮಾದಲ್ಲಿ ಸೆಂಟಿಮೆಂಟ್ ಉಕ್ಕಿಸುವ ಸಂಸಾರದ ಮೋಹ ಮೊರೆಯುವ ಪಾತ್ರದಲ್ಲಿರುವ ನಟ ರಜನಿ ಬೇಕಿಲ್ಲ. ನಮ್ಮ ಸ್ಟೈಲ್‌ಕಿಂಗ್ ರಜನಿ ಈ ಸಿನಿಮಾದಲ್ಲಿ ಎಲ್ಲಿಯೋ ಕಳೆದುಹೋಗಿದ್ದಾರೆ' ಎನ್ನುವ ಅಭಿಮಾನಿಗಳಿಗೂ ಕೊರತೆಯಿಲ್ಲ.

ಜನಪ್ರಿಯತೆಯಲ್ಲಿ ಆಕಾಶದೆತ್ತರಕ್ಕೆ ಏರಿ, ತನ್ನದೇ ಆದ 'ಕಲ್ಟ್' ನಿರ್ಮಿಸಿದ ಸೂಪರ್‌ಹೀರೋಗೆ ಹೀಗೆ ಸಾಗುವ ದಾರಿಯ ದ್ವಂದ್ವ ಕಾಡುವುದು ಸಹಜವೇ. ಅದರಲ್ಲೂ 'ಎಂಥಿರನ್'ನಂತಹ ಸಿನಿಮಾದಲ್ಲಿ ನಟಿಸಿದ ಬಳಿಕ, ಅದಕ್ಕಿಂತ ನಂತರದ್ದು ಯಾವುದು ಎಂದೇ ಚಿಂತಿಸಬೇಕಾಗುತ್ತದೆ. ಅದೇ ಹಳೇ ಅಂಡರ್‌ಗ್ರೌಂಡ್ ಡಾನ್‌ನ ಸವಕಲು ಪಾತ್ರವನ್ನು ಮತ್ತೆ ಮತ್ತೆ ಮಾಡುವುದು ರಜನಿಯನ್ನು ಎಲ್ಲೂ ಮುಂದಕ್ಕೆ ಕೊಂಡೊಯ್ಯಲಾರದು. ಇನ್ನಷ್ಟು ಹೊಸತನ್ನು ಚಿಂತಿಸುವುದು ಅನಿವಾರ್ಯ. ಹಾಗೆ ನೋಡಿದರೆ, ಕೌಟುಂಬಿಕ ಬದುಕನ್ನೂ ಸರಿದೂಗಿಸುವ ಇಳಿವಯಸ್ಸಿನ ಅಂಡರ್‌ಗ್ರೌಂಡ್ ಡಾನ್ ಒಬ್ಬನ ಕಥೆಯನ್ನು ಇದಕ್ಕಿಂತ ಮನಮುಟ್ಟುವಂತೆ ಕಮಲಹಾಸನ್ 'ನಾಯಗನ್' ಸಿನಿಮಾದಲ್ಲಿ ಹೇಳಿ ಮುಗಿಸಿ ದಶಕಗಳೇ ಕಳೆದಿವೆ. ಅಲ್ಪಸ್ವಲ್ಪ ಆ ಕಥೆಯನ್ನೇ ಹೋಲುವ ಇನ್ನೊಂದು ಕಥೆಯನ್ನು ಸೂಪರ್‌ಸ್ಟಾರ್ ರಜನಿ ತನ್ನದಲ್ಲದ ವಿಧಾನದಲ್ಲಿ ಹೇಳಹೊರಟಿರುವುದೇ ಅಸಂಗತ ಎನ್ನಬೇಕಾಗುತ್ತದೆ. ಹಾಗೆಂದೇ ಇದು ರಜನಿಯ ವೃತ್ತಿಜೀವನದ ಇಳಿಕೆಯ ಆರಂಭವೆ... ಎಂಬ ಚರ್ಚೆ ಶುರುವಾಗಿದೆ.

'ಕಬಾಲಿ' ಓಟ ನಡೆದಿರುವಂತೆಯೇ ರಜನಿಯ 'ಎಂಥಿರನ್ 2.0' ಚಿತ್ರದ ಕುರಿತ ಚರ್ಚೆ ಶುರುವಾಗಿದೆ. ಈ ಚಿತ್ರದ ಶೂಟಿಂಗ್ ಶೀಘ್ರ ಆರಂಭವಾಗಲಿದೆಯಂತೆ. ಮುಂದಿನ ವರ್ಷ ಬಿಡುಗಡೆಯಾಗಲಿರುವ ಈ ಸಿನಿಮಾದಲ್ಲಿ ಹಿಂದಿಯ ಜನಪ್ರಿಯ ತಾರೆ ಅಕ್ಷಯಕುಮಾರ್ ಕೂಡಾ ನಟಿಸುತ್ತಿರುವುದು ವಿಶೇಷ. ಕಬಾಲಿ ಬಿಡುಗಡೆಯ ವೇಳೆ ಹುಷಾರಿಲ್ಲ ಎಂದು ಅಮೆರಿಕಕ್ಕೆ ಹಾರಿದ್ದ ತಲೈವರ್, ಸಿನಿಮಾದ ಭಾರೀ ಸಕ್ಸೆಸ್ ಸುದ್ದಿಯ ಬೆನ್ನಲ್ಲೇ ಚೆನ್ನೈನಲ್ಲಿ ಪ್ರತ್ಯಕ್ಷವಾಗಿದ್ದಾರೆ.

ಅದೇನೇ ಇರಲಿ, ಭಾರತೀಯ ಚಿತ್ರರಂಗದ ಮಟ್ಟಿಗೆ ರಜನಿ ಖಂಡಿತಾ ಒಂದು ದಂತಕಥೆಯೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಆನ್‌ಲೈನ್ ಬುಕಿಂಗ್ ಶುರು ಮಾಡಿ 20 ನಿಮಿಷಗಳಲ್ಲೇ 6000 ಟಿಕೆಟ್‌ಗಳು ಬುಕಿಂಗ್ ಆದ ಇನ್ನೊಂದು ಪ್ರಕರಣ ಭಾರತೀಯ ಚಿತ್ರರಂಗದಲ್ಲಿ ಇಲ್ಲವೇ ಇಲ್ಲ. ರಜನಿ ಇವತ್ತಿಗೂ 'ಮಾರುಕಟ್ಟೆಯ ಚಕ್ರವರ್ತಿ' ಆಗಿರುವುದರಿಂದಲೇ ತಮಿಳುನಾಡಿನ ಶೇಕಡಾ 75ರಷ್ಟು ಸ್ಕ್ರೀನ್‌ಗಳಲ್ಲಿ ಒಮ್ಮಲೇ 'ಕಬಾಲಿ' ಅಬ್ಬರಿಸಿದೆ. ಎಲ್ಲ ಗಲಿಬಿಲಿಗಳ ಮಧ್ಯೆಯೂ ನಿರ್ಮಾಪಕ ಅತ್ಯಧಿಕ ಸೇಫ್ ಎಂದಾಗುವಾಗ, ಬೇರೆ ತರ್ಕಗಳಿಗೆ ಅವಕಾಶವೂ ಇರುವುದಿಲ್ಲ. ಅದನ್ನೇ 'ರಜನಿ ಡಾ..' ಎನ್ನುವುದು!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65